7. ವಿಷಯ: 2012ರಲ್ಲಿ ಚಿಕ್ಕಮಗಳೂರು ನಗರಕ್ಕೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಮಂಜರಾತಿ ದೊರೆತಿದ್ದು, ನೋಡಲ್ ಅಧಿಕಾರಿಯನ್ನು ನೇಮಕಗೊಳಿಸಿ ಇದರ ನಿರ್ವಹಣೆಯನ್ನು ಮಾಡುತ್ತಿದ್ದರೂ ಸಹ ತರಗತಿಗಳು ಪ್ರಾರಂಭವಾಗದಿರುವ ಬಗ್ಗೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, 2012–13ನೇ ಸಾಲಿನಲ್ಲಿ ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಿದ್ದೆವು. ಇನ್ನೂ ಅದರ ಕಾಮಗಾರಿಯನ್ನು ಪ್ರಾರಂಭ ಮಾಡಿ, ಕಾಲೇಜನ್ನು ಪ್ರಾರಂಭಿಸಿಲ್ಲ. ಅದಕ್ಕೆ ವಿಳಂಬಕ್ಕೆ ಕಾರಣವೇನು? ಯವಾಗ ಕಾಲೇಜನ್ನು ಪ್ರಾರಂಭ ಮಾಡುತ್ತೀರಿ? ಬಿಲ್ಡಿಂಗ್ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರಾಸೋದ್ಯಮ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,. . . ಚಿಕ್ಕಮಗಳೂರು ಇಲ್ಲಿ ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು 2013–14ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಅದರಂತೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ ಗ್ರಾಮದ ವ್ಯಾಪ್ತಿಯಲ್ಲಿ ಒಟ್ಟು 31.12 ಎಕರೆ ಜಮೀನನ್ನು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ನಿರ್ಮಾಣಕ್ಕೆ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರು ದಿನಾಂಕ: 10.07.2014 ರಂದು ಒದಗಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 73 ಹೆಚ್‌ಪಿಟಿ 2012 ದಿನಾಂಕ: 25.09.2014 ರಲ್ಲಿ ಚಿಕ್ಕಮಗಳೂರುನಲ್ಲಿರುವ ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ನಿಯಮಾನುಸಾರ ಬೆಳಗಾವಿಯ ವಿಶ್ವೇಶ್ವರಯ್ಯ

ತಾಂತ್ರಿಕ ವಿಶ್ವವಿದ್ಯಾಲಯಕ್ಕೆ (ವಿ.ಟಿ.ಯು) ಹಸ್ತಾಂತರಿಸಲಾಗಿದೆ. ನಿಯಮಾವಳಿಯ ಪ್ರಕಾರ ಸದರಿ ಕಾಲೇಜಿಗೆ ಕಟ್ಟಡ, ಇತರೇ ಮೂಲಭೂತ ಸೌಕರ್ಯಗಳನ್ನು ಹಾಗೂ ಬೋಧಕ/ಬೋಧಕೇತರ ಹುದ್ದೆಗಳನ್ನು ಎ.ಐ.ಸಿ.ಟಿ.ಇ. ನಿಯಮಾವಳಿ ಪ್ರಕಾರ ಭರ್ತಿ ಮಾಡುವ ಆವರ್ತಕ ಮತ್ತು ಅನಾವರ್ತಕ ವೆಚ್ಚ ಭರಿಸುವ ಜವಾಬ್ದಾರಿಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ತನ್ನ ಸಂಪನ್ಮೂಲದಿಂದ ಒದಗಿಸುವುದು ಎಂದು ಆದೇಶಿಸಲಾಗಿದೆ.

ವಿ.ಟಿ.ಯು. ರವರು ಕಟ್ಟಡವನ್ನು ನಿರ್ಮಿಸಿ, ಸಿಬ್ಬಂದಿ ಮತ್ತು ಇತರೇ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ ನಂತರ ಹಾಗೂ ಎ.ಐ.ಸಿ.ಟಿ.ಇ. ಅನುಮೋದನೆ ಪಡೆದು ತರಗತಿಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಸಿ.ಟಿ. ರವಿ:– ಮಾನ್ಯ ಸಚಿವರೆ ಉತ್ತರವನ್ನು ಒದಗಿಸಿದ್ದೀರಿ. ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅವರ ಹತ್ತಿರ ಕೆಲಸ ಮಾಡಿಸಬೇಕೆಲ್ಲವೇ? ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ 475 ಕೋಟಿ ರೂ. ಗಳಷ್ಟು ಹಣವಿದೆ.

ಶ್ರೀ ಟಿ.ಬಿ. ಜಯಚಂದ್ರ:– AICTE ಅನುಮೋದನೆ ಪಡೆದು ಪ್ರಾರಂಭ ಮಾಡಬೇಕಲ್ಲವೇ? AICTE permission ಬರಲೇಬೇಕಲ್ಲವೇ?

ಶ್ರೀ ಸಿ.ಟಿ. ರವಿ:– ಬರಬೇಕು. ಆದರೆ ನೀವು AICTE ನಲ್ಲಿ ಕಾಮಗಾರಿ ಪ್ರಾರಂಭವಾಗದೇ ಅನುಮತಿ ಕೊಡುವುದಿಲ್ಲ. ನಾವು land transfer ಮಾಡಿದ್ದೇವೆ, ದುಡ್ಡಿದೆ. ಆ ಕಾಮಗಾರಿ ಪ್ರಾರಂಭ ಮಾಡುವ ಕೆಲಸ ಆಗಬೇಕು. ಆಮೇಲೆ ಅನುಮತಿಗೆ ಅರ್ಜಿ ಹಾಕಬೇಕು. ಮೊದಲಿನ ರೀತಿ ಬಾಡಿಗೆ ಕಟ್ಟಡದಲ್ಲಿ ಅನುಮತಿ ಕೊಡುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಒಟ್ಟಿನಲ್ಲಿ ತಾವು ಪ್ರಾರಂಭ ಮಾಡಿರುವುದನ್ನು ನಾವು ಈಗ ಮಾಡಬೇಕು.

(ಗೊಂದಲ)

ಅಧ್ಯಕ್ಷರು:– Plan and estimate ಆಗಿದೆಯಾ?

ಶ್ರೀ ಸಿ.ಟಿ. ರವಿ:– Plan and estimate ಎಲ್ಲಾ ಆಗಿದೆ.

ಅಧ್ಯಕ್ಷರು:– ಅದು ಎಲ್ಲಿದೆ?

ಶ್ರೀ ಸಿ.ಟಿ. ರವಿ:– ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದವರ ಹತ್ತಿರ ಇದೆ.

ಅಧ್ಯಕ್ಷರು:– ಅದನ್ನು ಸರ್ಕಾರಕ್ಕೆ ಕಳುಹಿಸುವುದಕ್ಕೆ ಹೇಳಿ. ಅದನ್ನು ತಾವು ತರಿಸಿಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ:– VTU ನಲ್ಲಿ ಹಣದ ಕೊರತೆ ಇಲ್ಲ.

ಶ್ರೀ ಸಿ.ಟಿ. ರವಿ:– ಹಣದ ಕೊರತೆ ಇಲ್ಲ, ಆದರೆ ಇಚ್ಛಾಶಕ್ತಿಯದ್ದು ಮಾತ್ರ ಕೊರತೆ ಇದೆ.

ಶ್ರೀ ಟಿ.ಬಿ. ಜಯಚಂದ್ರ:– ಅದನ್ನು ನಾನು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು:– ಈಗ ಶೂನ್ಯವೇಳೆ.